**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1901\2016\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 16/07/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಶಿವಮೊಗ್ಗ ಜಿಲ್ಲೆ ಯೋಜನಾ ಉಪವಿಭಾಗದ 1)ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಎಂ.ಜಿ.ಚಂದ್ರಪ್ಪ, ಕಿರಿಯ ಅಭಿಯಂತರರುಗಳಾಗಿದ್ದ 2) ಶ್ರೀ.ಪಿ.ವಿ.ಕೃಷ್ಣಾರೆಡ್ಡಿ ಮತ್ತು 3)ಶ್ರೀ.ಟಿ.ವಿ.ಶ್ರೀನಿವಾಸ, 4) ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ.ಜಿ.ಎಸ್.ಶಿವದೇವ್ [ಪ್ರಸ್ತುತ ನಿವೃತ್ತ], ಕಾರ್ಯಪಾಲಕ ಅಭಿಯಂತರರುಗಳಾಗಿದ್ದ 5) ಶ್ರೀ.ಗಂಗಾ ನಾಯ್ಕ ಮತ್ತು 6) ಶ್ರೀ.ಕೆ.ಜಿ.ಸತೀಶ್ ಚಂದ್ರನ್ [ಪ್ರಸ್ತುತ ನಿವೃತ್ತ] ರವರುಗಳ ಕರ್ತವ್ಯ ಲೋಪದ ಬಗ್ಗೆ.

**********

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕ್ ತಳವಾರಕೇರಿ ನಿವಾಸಿಯಾದ ಶ್ರೀ.ಕೆ.ಆರ್.ರಾಜಕುಮಾರ್ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶಿವಮೊಗ್ಗ ಜಿಲ್ಲೆ ಯೋಜನಾ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಎಂ.ಜಿ.ಚಂದ್ರಪ್ಪ, (ಇನ್ನು ಮುಂದೆ, '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕ್ ಮುದವಾಲದಿಂದ ಆಯನೂರು ಎನ್‌ಹೆಚ್-206 ರವರೆಗಿನ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ರಸ್ತೆ ಕಾಮಗಾರಿಯು 2016ನೇ ಸಾಲಿನಲ್ಲಿ ನಡೆದಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ₹482.88 ಲಕ್ಷಗಳು ಪ್ಯಾಕೇಜ್ ಸಂ:ಕೆ.ಎನ್.24-102 ಲೆಕ್ಕ ಶೀರ್ಷಿಕೆ ಪಿಎಂಜಿಎಸ್‌ವೈ-2 ಯೋಜನೆ ಅಡಿ ಬಂದಿದೆ. ಈ ಕಾಮಗಾರಿಯನ್ನು ಎದುರುದಾರರ ಕಛೇರಿಯಿಂದ ಮಾಡಿದ್ದು, ಈ ಕಾಮಗಾರಿಯ ಒಟ್ಟು 5 ಬಿಲ್‌ಗಳು ಆಗಿವೆ. ಆದರೆ, ಎದುರುದಾರರು ಆ ಕಾಮಗಾರಿಯನ್ನು ಅಂದಾಜು ಪಟ್ಟಿಯಂತೆ ಮಾಡದೇ ಬಿಲ್‌ಗಳನ್ನು ಮಾತ್ರ ಅಂದಾಜು ಪಟ್ಟಿಯಂತೆ ಮಾಡಿಕೊಂಡು ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ವರದಿ ಸಲ್ಲಿಸುವಂತೆ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ ರವರಿಗೆ ಕೇಳಲಾಗಿ, ಕಾರ್ಯಪಾಲಕ ಅಭಿಯಂತರರು–3 (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

ದೂರುದಾರರು ತಿಳಿಸಿದ ಆರೋಪಗಳನ್ನು ಪರಿಶೀಲಿಸಲಾಗಿ ಹಾಗೂ ರಸ್ತೆ ಪರಿವೀಕ್ಷಣೆ ಸಮಯದಲ್ಲಿ ನೀಡಲಾದ ಸೂಚನೆ ಮತ್ತು ಆದೇಶಗಳನ್ವಯ ಕಾಮಗಾರಿಯನ್ನು ನಿರ್ವಹಿಸಿದೆ. ಸದರಿ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ, ಈ ಕೆಳಗಿನ ಅಂಶಗಳನ್ನು ಗಮನಿಸಿದೆ–

1) ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ವಿಸ್ತೃತ ಯೋಜನಾ ವರದಿಯ ಸಲಹೆಗಾರರಿಂದ ತಯಾರಿಸಿದೆ;
2) ಸದರಿ ರಸ್ತೆ ಕಾಮಗಾರಿಯ ಟೆಂಡರನ್ನು ಶ್ರೀ.ಸಿ.ವಿ.ಚಂದ್ರಶೇಖರ್, 1ನೇ ದರ್ಜೆ ಗುತ್ತಿಗೆದಾರರು, ಹೊಸನಗರ ರವರು ಪಡೆದುಕೊಂಡು ಕಾಮಗಾರಿಯನ್ನು ನಿರ್ವಹಿಸಿದ್ದಾರೆ;
3) ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು ಯೋಜನಾ ಅನುಷ್ಠಾನ ಘಟಕದ ಸಂಪೂರ್ಣ ಪರಿಶೀಲನೆ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಯೋಜನಾ ಉಪ ವಿಭಾಗ, ಶಿವಮೊಗ್ಗದ ಅಭಿಯಂತರರುಗಳು ಕಾಮಗಾರಿಯನ್ನು ಆರಂಭದಿಂದ ಮುಕ್ತಾಯದವರೆಗೆ ಮೇಲುಸ್ತುವಾರಿ ನಡೆಸಿದ್ದಾರೆ;
4) ಕಾಮಗಾರಿಯ ಪ್ರಗತಿ ಸಮಯದಲ್ಲಿ ಇಲಾಖೆಯ ಮೇಲಾಧಿಕಾರಿಗಳು ಪರಿವೀಕ್ಷಣೆ ಮಾಡಿದ್ದಾರೆ ಹಾಗೂ ಸ್ಥಳ, ವಾಹನಗಳು, ಸಾರ್ವಜನಿಕರು ಹಾಗೂ ಪ್ರಜಾ ಪ್ರತಿನಿಧಿಗಳ ಕೋರಿಕೆ ಹಾಗೂ ಅವಶ್ಯಕತೆ ಮೇರೆಗೆ ಕೆಲವು ಅವಶ್ಯಕ ಬದಲಾವಣೆಯನ್ನು ಮಾಡಲು ಅನುಮೋದಿಸಿದ್ದಾರೆ ಹಾಗೂ ಅವಶ್ಯಕ ಪರಿವೀಕ್ಷಣಾ ಟಿಪ್ಪಣಿಗಳನ್ನು ನೀಡಿರುವುದು ಕಂಡು ಬಂದಿದೆ. ಅದರನ್ವಯ ಕೆಲವೊಂದು ಐಟಂಗಳ ಪ್ರಮಾಣದಲ್ಲಿ ಬದಲಾವಣೆಯಾಗಿದೆ;
5) ಕಾಮಗಾರಿಯ ಪ್ರಗತಿಯ ವೇಳೆ ಹಾಗೂ ಪೂರ್ಣಗೊಳಿಸಿದ ಮೇಲೆ ಇಲಾಖೆ ಅಡಿಯಲ್ಲಿ ಯೋಜನೆಗಳ ಅನುಷ್ಠಾನದ ನಿಯಮಾನುಸಾರ ರಾಜ್ಯ ಗುಣಮಟ್ಟ ಮೇಲ್ವಿಚಾರಣೆ (SQM) ಮತ್ತು ರಾಷ್ಟ್ರೀಯ ಗುಣಮಟ್ಟ ಮೇಲ್ವಿಚಾರಣೆ (NQM) ಗಳ ಪ್ರತಿನಿಧಿಗಳು ಕಾಮಗಾರಿಯ ತಪಾಸಣೆ ಮಾಡಿದ್ದಾರೆ ಹಾಗೂ ಪ್ರಮಾಣ ಪತ್ರಗಳನ್ನು ಮತ್ತು ಗುಣ ನಿಯಂತ್ರಣ ವರದಿಗಳನ್ನು ನೀಡಿರುವುದು ದಾಖಲೆಗಳಿಂದ ಕಂಡು ಬಂದಿದೆ;
6) ರಸ್ತೆಯ ಕಾಮಗಾರಿ ಪ್ರಗತಿಯ ವೇಳೆ, ರಸ್ತೆಯ ಉದ್ದದ ವ್ಯಾಪ್ತಿಯಲ್ಲಿ ಬರುವ ಗ್ರಾಮಸ್ಥರು ಮತ್ತು ರಸ್ತೆಯನ್ನು ಉಪಯೋಗಿಸುವ ಸಾರ್ವಜನಿಕರು ಸಹ ಕಾಮಗಾರಿಯನ್ನು ಪ್ರತಿ ಹಂತದಲ್ಲೂ ವೀಕ್ಷಿಸಿದ್ದಾರೆ;
7) ಸದರಿ ಕಾಮಗಾರಿಗಳಿಗೆ 5 ವರ್ಷಗಳ ನಿರ್ವಹಣಾ ಅವಧಿಯಿದ್ದು, 6ನೇ ವರ್ಷದಲ್ಲಿ ಸಮರ್ಪಕವಾದ ರಸ್ತೆಯನ್ನು ಇಲಾಖೆಗೆ ಹಸ್ತಾಂತರ ಮಾಡುವ ಕರಾರುಗಳಿದ್ದು, ಯಾವುದೇ ಸಣ್ಣಪುಟ್ಟ ನ್ಯೂನತೆ ಮತ್ತು ದೋಷಗಳಿದ್ದಲ್ಲಿ, ಸರಿಪಡಿಸಬಹುದಾಗಿದೆ ಮತ್ತು ವಾರ್ಷಿಕ ನಿರ್ವಹಣೆ ಬಿಲ್ಲನ್ನು ಪಾವತಿಸುವ ಮುಂಚಿತವಾಗಿ ಅವುಗಳನ್ನು ಸರಿಪಡಿಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಇಲಾಖಾ ಅಭಿಯಂತರರು ಸ್ಪಷ್ಟಪಡಿಸಿದ್ದಾರೆ;

1901/16



8) ತನಿಖೆಯ ಸಮಯದಲ್ಲಿ ಗಮನಿಸಲಾದ ಕೆಲವು ಅಂಶಗಳ ಬಗ್ಗೆ ಉದಾಹರಣೆ: ಕೆರೆ ದಂಡೆ ವ್ಯಾಪ್ತಿಯಲ್ಲಿ, ರಸ್ತೆ ಕಿರಿದಾಗಿರುವ ವ್ಯಾಪ್ತಿಯಲ್ಲಿ, ಗ್ರಾಮದ ವ್ಯಾಪ್ತಿಯಲ್ಲಿ, ಶಾಲೆಗಳ ವ್ಯಾಪ್ತಿಯಲ್ಲಿ ಹಾದು ಹೋಗಿರುವ ರಸ್ತೆಯ ಮಾರ್ಗದಲ್ಲಿ, ಸೂಚನಾ ಫಲಕಗಳು ಕಿತ್ತು ಹೋಗಿರುವುದು ಕಂಡು ಬಂದಿದೆ, ವಾಹನ ಸವಾರರು, ಗ್ರಾಮಸ್ಥರು ಮತ್ತು ಮಕ್ಕಳ ಹಿತದೃಷ್ಟಿಯಿಂದ ಅದನ್ನು ಕೂಡಲೇ ಪುನಃ ಸ್ಥಾಪಿಸಲು ಸೂಚಿಸಲಾಗಿದೆಯೆಂದು ಹೇಳಿದ್ದಾರೆ.

4. ತನಿಖಾ ವರದಿಗೆ ಎದುರುದಾರರಿಂದ ಆಕ್ಷೇಪಣೆ ಮತ್ತು ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಎದುರುದಾರರು ಮತ್ತು ದೂರುದಾರರು ತಮ್ಮ ಆಕ್ಷೇಪಣೆ ಮತ್ತು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ದೂರಿಗೆ ಸಂಬಂಧಿಸಿದ ಕಾಮಗಾರಿಯ ಮೇಲುಸ್ತುವಾರಿ ವಹಿಸಿದ ಶ್ರೀ.ಪಿ.ವಿ.ಕೃಷ್ಣಾರೆಡ್ಡಿ, ಶ್ರೀ.ಟಿ.ವಿ.ಶ್ರೀನಿವಾಸ, ಕಿರಿಯ ಅಭಿಯಂತರರುಗಳು, ಶ್ರೀ.ಜಿ.ಎಸ್.ಶಿವದೇವ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಶ್ರೀ.ಎನ್.ಗಂಗಾ ನಾಯ್ಕ ಮತ್ತು ಶ್ರೀ.ಕೆ.ಜಿ.ಸತೀಶ್‌ಚಂದ್ರನ್ ಕಾರ್ಯಪಾಲಕ ಅಭಿಯಂತರರುಗಳು ರವರುಗಳನ್ನು 2 ರಿಂದ 6ನೇ ಎದುರುದಾರರುಗಳನ್ನಾಗಿ ಮುಖಮುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಯಿತು.

6. ಎರಡರಿಂದ 6ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳಲ್ಲಿ –

ಯೋಜನಾ ಉಪವಿಭಾಗ, ಶಿವಮೊಗ್ಗ ಇಲ್ಲಿ ತಾವು ಕಾರ್ಯನಿರ್ವಹಿಸುತ್ತಿರುವ \ ಕಾರ್ಯನಿರ್ವಹಿಸಿದ ಅವಧಿಯನ್ನು ಹೇಳಿ, ಸದರಿ ದೂರಿಗೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ಸ್ಥಳ ತನಿಖೆ ನಡೆಸಿ, ವರದಿಯನ್ನು ಸಲ್ಲಿಸಿದ್ದಾರೆ, ದೂರಿನಲ್ಲಿ ಯಾವುದೇ ಸತ್ಯಾಂಶ ಇಲ್ಲವೆಂದು ಹೇಳಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕ್ ಮುದುವಾಲ ದಿಂದ ಆಯನೂರು ರಸ್ತೆವರೆಗಿನ [ಎನ್‌ಹೆಚ್–206 – 0.00 ಕಿ.ಮೀ. ನಿಂದ 8.403 ಕಿ.ಮೀ] ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯ ಅಂದಾಜು ಮೊತ್ತ ₹482.88 ಲಕ್ಷಗಳು, ಪ್ಯಾಕೇಜ್ ಸಂ:ಕೆಎನ್ 24–102ನ್ನು ಶ್ರೀ.ಸಿ.ವಿ.ಚಂದ್ರಶೇಖರ್, 1ನೇ ದರ್ಜೆ ಗುತ್ತಿಗೆದಾರರು, ಹೊಸನಗರ ರವರಿಗೆ ಕರಾರು ಸಂಖ್ಯೆ:5/2013–14 ದಿನಾಂಕ:01/03/14ರಡಿ ₹464.905 ಲಕ್ಷಗಳಿಗೆ ವಹಿಸಿ ದಿನಾಂಕ:01/03/14ರಂದು ಕಾರ್ಯಾದೇಶವನ್ನು ನೀಡಿದೆ. ಕರಾರಿನ್ವಯ ಸದರಿ

ಕಾಮಗಾರಿಯನ್ನು 9 ತಿಂಗಳೊಳಗಾಗಿ [ಮಳೆಗಾಲ ಸೇರಿಸಿ] (ದಿನಾಂಕ:02/12/14) ಮುಗಿಸಬೇಕಿದೆ ಮತ್ತು ಸದರಿ ಕಾಮಗಾರಿಯ ನಿರ್ವಹಣಾ ಅವಧಿ 5 ವರ್ಷ ಆಗಿದೆ;

2) ಸದರಿ ಕಾಮಗಾರಿಯನ್ನು ದಿನಾಂಕ:03/03/14ರಂದು ಪ್ರಾರಂಭಿಸಿ ದಿನಾಂಕ:25/07/16ರಂದು ಮುಕ್ತಾಯಗೊಳಿಸಿರುವುದು ಕಂಡು ಬಂದಿದೆ. ನಿಗದಿತ ಅವಧಿಯಲ್ಲಿ ಕಾಮಗಾರಿಯನ್ನು ಗುತ್ತಿಗೆದಾರರು ಮುಕ್ತಾಯಗೊಳಿಸದೇ ಇರುವ ಕಾರಣ, ಕಾಲಾವಧಿ ವಿಸ್ತರಣೆ ಕೋರಿ ಕಾರ್ಯಪಾಲಕ ಅಭಿಯಂತರರ ವರದಿಯ ಆಧಾರದ ಮೇಲೆ ಅಧೀಕ್ಷಕ ಅಭಿಯಂತರರಿಗೆ ವರದಿ ಮಾಡಿದ್ದಾರೆ. ಅದರನ್ವಯ, ಅಧೀಕ್ಷಕ ಅಭಿಯಂತರರು ದಿ:03/12/14 ರಿಂದ ದಿನಾಂಕ:31/07/16 ರವರೆಗೆ ಪರಿಷ್ಕೃತ ಕಾಲಾವಧಿ ವಿಸ್ತರಣೆ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿದ್ದಾರೆ. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ, ಬೆಂಗಳೂರು ರವರು ಸದರಿ ಶಿಫಾರಸ್ಸನ್ನು ಪರಿಗಣಿಸಿ, ವಿಳಂಬಕ್ಕೆ ಗುತ್ತಿಗೆದಾರರು ಹೊಣೆಯಾಗಿರುವುದರಿಂದ, ಗುತ್ತಿಗೆದಾರರ ಬಿಲ್ಲಿನಲ್ಲಿ ₹1 ಲಕ್ಷಗಳನ್ನು ಕಡಿತಗೊಳಿಸುವ ಷರತ್ತಿಗೊಳಪಟ್ಟು ದಿ:31/07/16ರವರೆಗೆ ಪರಿಷ್ಕೃತ ಕಾಲಾವಧಿ ವಿಸ್ತರಣೆಗೆ ಅನುಮೋದನೆಯನ್ನು ದಿ:14/09/16ರಂದು ನೀಡಿದ್ದಾರೆ;

3) ಸದರಿ ಕಾಮಗಾರಿಗೆ ಸಂಬಂಧಪಟ್ಟ ಮುದ್ರಿತ ಅಳತೆ ಪುಸ್ತಕ ಸಂಖ್ಯೆ:1/24–102 [ಪುಟ ಸಂಖ್ಯೆ:1 ರಿಂದ 18], 2/24–102 [ಪುಟ ಸಂಖ್ಯೆ:19 ರಿಂದ 24], 3/24–102 [ಪುಟ ಸಂಖ್ಯೆ:25 ರಿಂದ 31], 4/24–102 [ಪುಟ ಸಂಖ್ಯೆ:32 ರಿಂದ 42], 5/24–102 [ಪುಟ ಸಂಖ್ಯೆ:43 ರಿಂದ 48], 6/24–102 [ಪುಟ ಸಂಖ್ಯೆ:49 ರಿಂದ 67] ಮತ್ತು 7/24–102 [ಪುಟ ಸಂಖ್ಯೆ:68 ರಿಂದ 87] ರ ಪ್ರತಿಗಳು ಕಡತದಲ್ಲಿ ಲಭ್ಯವಿದೆ;

4) ಕಾಮಗಾರಿಯ ಅಳತೆಯನ್ನು ಸ್ಥಳದಲ್ಲಿ ದಾಖಲಿಸಿದ ಅಳತೆ ವಹಿ ಲಭ್ಯವಿಲ್ಲ. ಕರ್ನಾಟಕ ಲೋಕೋಪಯೋಗಿ ಸಂಹಿತೆ 110(1)(ಎಫ್) ಅನ್ವಯ ₹25 ಲಕ್ಷಕ್ಕೂ ಮೇಲ್ಪಟ್ಟ ಅಂದಾಜಿನ ಕಾಮಗಾರಿಗಳ ಅಳತೆ ಪುಸ್ತಕವನ್ನು ಸಾಫ್ಟ್ ಮತ್ತು ಹಾರ್ಡ್ ಕಾಪಿಗಳಲ್ಲಿ ದಾಖಲಿಸಬೇಕು. ಸದರಿ ದೂರಿನಲ್ಲಿ ಹಾರ್ಡ್ ಕಾಪಿಯಲ್ಲಿ ದಾಖಲಿಸಿದ ಇ–ಅಳತೆ ಪುಸ್ತಕವಿದ್ದು, ಸಾಫ್ಟ್ ಕಾಪಿಯಲ್ಲಿ ಕಾಮಗಾರಿಯ ಅಳತೆಗಳನ್ನು ದಾಖಲಿಸಿದ ಬಗ್ಗೆ ದಾಖಲೆಗಳಿಲ್ಲ. ಮುಂದುವರೆದು, ಕಾಮಗಾರಿಯ ಉಸ್ತುವಾರಿ ವಹಿಸಿದ ಅಭಿಯಂತರರು ಕಾಮಗಾರಿಯ ಅಳತೆಯನ್ನು ಸ್ಥಳದಲ್ಲಿಯೇ ದಾಖಲಿಸಿದ ಬಗ್ಗೆ ನೋಟ್ ಪುಸ್ತಕ (ಫೀಲ್ಡ್ ಪುಸ್ತಕ)\ ಕೈಬರಹದ ಅಳತೆ ಪುಸ್ತಕ ಲಭ್ಯವಿಲ್ಲ.

5) ಕಡತದಲ್ಲಿರುವ ಮುದ್ರಿತ ಅಳತೆ ವಹಿಯನ್ವಯ–

ಅ) ಅಳತೆ ವಹಿ ಸಂಖ್ಯೆ:1/24–102ರಲ್ಲಿ ಕಾಮಗಾರಿಯ Pre-measurementನ್ನು ದಿ:01/10/14, 07/10/14 ಮತ್ತು 20/11/14ರಂದು, ಕಾಮಗಾರಿಯ ಅಳತೆಯನ್ನು ದಿ:26/11/14ರಂದು ದಾಖಲಿಸಿದೆಯೆಂದು ಹೇಳಿದೆ. ಸದರಿ ಅಳತೆಗಳನ್ನು 2ನೇ ಎದುರುದಾರರು ದಾಖಲಿಸಿದ್ದಾರೆ. ಪುಟ ಸಂಖ್ಯೆ–12ರಲ್ಲಿ 1ನೇ ಐಟಂ, ಪುಟ ಸಂಖ್ಯೆ–15ರಲ್ಲಿ 3 ಮತ್ತು 8ನೇ ಐಟಂ ಮತ್ತು ಪುಟ ಸಂಖ್ಯೆ–16, ಪುಟ ಸಂಖ್ಯೆ–17ರ 45 ಮತ್ತು 46ನೇ ಐಟಂ ಗಳ ಅಳತೆಯಲ್ಲಿ ತಿದ್ದುಪಡಿ ಮಾಡಿರುವುದು ಕಂಡು ಬಂದಿದ್ದು, ಸದರಿ ತಿದ್ದುಪಡಿಗೆ 2ನೇ ಎದುರುದಾರರು ಸಣ್ಣ

1901/16



ಸಹಿಯನ್ನು ಮಾಡಿಲ್ಲ. ಸದರಿ ಅಳತೆಗಳನ್ನು 4ನೇ ಎದುರುದಾರರು Check measurement ಮಾಡಿದ್ದಾರೆ;

ಆ) ಅಳತೆ ವಹಿ ಸಂಖ್ಯೆ:2/24–102ರಲ್ಲಿ ಕಾಮಗಾರಿಯ ಅಳತೆಯನ್ನು ದಿ:09/12/14 ಮತ್ತು 29/12/14ರಂದು ದಾಖಲಿಸಿದೆ. ಸದರಿ ಅಳತೆಗಳನ್ನು 2ನೇ ಎದುರುದಾರರು ದಾಖಲಿಸಿದ್ದಾರೆ. ಪುಟ ಸಂಖ್ಯೆ–19ರಲ್ಲಿ 3ನೇ ಐಟಂ ಮತ್ತು ಪುಟ ಸಂಖ್ಯೆ–20ರಲ್ಲಿ 8ನೇ ಐಟಂ ನ ಆಳತೆಯಲ್ಲಿ ತಿದ್ದುಪಡಿ ಮಾಡಿರುವುದು ಕಂಡು ಬಂದಿದ್ದು, ಸದರಿ ತಿದ್ದುಪಡಿಗೆ 2ನೇ ಎದುರುದಾರರು ಸಣ್ಣ ಸಹಿಯನ್ನು ಮಾಡಿಲ್ಲ. ಸದರಿ ಅಳತೆಗಳನ್ನು 4ನೇ ಎದುರುದಾರರು Check measurement ಮಾಡಿದ್ದಾರೆ;

ಇ) ಅಳತೆ ವಹಿ ಸಂಖ್ಯೆ:3/24–102ರಲ್ಲಿ ಕಾಮಗಾರಿಯ Pre-measurementನ್ನು ದಿ:09/12/14 ಮತ್ತು ಕಾಮಗಾರಿಯ ಅಳತೆಯನ್ನು ದಿ:09/03/15ರಂದು ದಾಖಲಿಸಿದೆ. ಸದರಿ ಅಳತೆಗಳನ್ನು 2ನೇ ಎದುರುದಾರರು ದಾಖಲಿಸಿದ್ದಾರೆ. ಪುಟ ಸಂಖ್ಯೆ–26ರಲ್ಲಿ 1ನೇ ಐಟಂ ಮತ್ತು ಪುಟ ಸಂಖ್ಯೆ–27ರಲ್ಲಿ 8ನೇ ಐಟಂ ನ ಆಳತೆಯಲ್ಲಿ ತಿದ್ದುಪಡಿ ಮಾಡಿರುವುದು ಕಂಡು ಬಂದಿದ್ದು, ಸದರಿ ತಿದ್ದುಪಡಿಗೆ 2ನೇ ಎದುರುದಾರರು ಸಣ್ಣ ಸಹಿಯನ್ನು ಮಾಡಿಲ್ಲ. ಸದರಿ ಅಳತೆಗಳನ್ನು 4ನೇ ಎದುರುದಾರರು Check measurement ಮಾಡಿದ್ದಾರೆ;

ಈ) ಅಳತೆ ವಹಿ ಸಂಖ್ಯೆ:4/24–102ರಲ್ಲಿ ಕಾಮಗಾರಿಯ Pre-measurementನ್ನು ದಿ:09/03/15, 19/03/15, 25/03/15 ಮತ್ತು ಕಾಮಗಾರಿಯ ಅಳತೆಯನ್ನು ದಿ:28/03/15ರಂದು ದಾಖಲಿಸಿದೆ. ಸದರಿ ಅಳತೆಗಳನ್ನು 2ನೇ ಎದುರುದಾರರು ದಾಖಲಿಸಿದ್ದಾರೆ. ಪುಟ ಸಂಖ್ಯೆ–36ರಲ್ಲಿ 8ನೇ ಐಟಂ (2 ಕಡೆ) ನ ಆಳತೆಯಲ್ಲಿ ತಿದ್ದುಪಡಿ ಮಾಡಿರುವುದು ಕಂಡು ಬಂದಿದ್ದು, ಸದರಿ ತಿದ್ದುಪಡಿಗೆ 2ನೇ ಎದುರುದಾರರು ಸಣ್ಣ ಸಹಿಯನ್ನು ಮಾಡಿಲ್ಲ. ಸದರಿ ಅಳತೆಗಳನ್ನು 4ನೇ ಎದುರುದಾರರು Check measurement ಮಾಡಿದ್ದಾರೆ;

ಉ) ಅಳತೆ ವಹಿ ಸಂಖ್ಯೆ:5/24–102ರಲ್ಲಿ ಕಾಮಗಾರಿಯ Pre-measurementನ್ನು ದಿ:09/03/15, 19/03/15 & 25/03/15 ಮತ್ತು ಕಾಮಗಾರಿಯ ಅಳತೆಯನ್ನು ದಿ:04/01/16 ಮತ್ತು 11/01/16ರಂದು ದಾಖಲಿಸಿದೆ. ಸದರಿ ಅಳತೆಗಳನ್ನು 2ನೇ ಎದುರುದಾರರು ದಾಖಲಿಸಿದ್ದಾರೆ. ಸದರಿ ಅಳತೆಗಳನ್ನು 4ನೇ ಎದುರುದಾರರು Check measurement ಮಾಡಿದ್ದಾರೆ;

ಊ) ಅಳತೆ ವಹಿ ಸಂಖ್ಯೆ:6/24–102ರಲ್ಲಿ ಕಾಮಗಾರಿಯ ಅಳತೆಯನ್ನು ದಿ:04/02/16, 10/02/16, 11/02/16 ಮತ್ತು 02/03/16ರಂದು ದಾಖಲಿಸಿದೆ. ಸದರಿ ಅಳತೆಗಳನ್ನು 3ನೇ ಎದುರುದಾರರು ದಾಖಲಿಸಿದ್ದಾರೆ. ಪುಟ ಸಂಖ್ಯೆ–65ರಲ್ಲಿ 42ನೇ ಐಟಂ ಮತ್ತು ಪುಟ ಸಂಖ್ಯೆ–66ರಲ್ಲಿ 46ನೇ ಐಟಂ ನ ಆಳತೆಯಲ್ಲಿ ತಿದ್ದುಪಡಿ ಮಾಡಿರುವುದು ಕಂಡು ಬಂದಿದ್ದು, ಸದರಿ ತಿದ್ದುಪಡಿಗೆ 3ನೇ ಎದುರುದಾರರು ಸಣ್ಣ ಸಹಿಯನ್ನು ಮಾಡಿಲ್ಲ. ಸದರಿ ಅಳತೆಗಳನ್ನು 1ನೇ ಎದುರುದಾರರು Check measurement ಮಾಡಿದ್ದಾರೆ;

ಋ) ಅಳತೆ ವಹಿ ಸಂಖ್ಯೆ:7/24–102ರಲ್ಲಿ ಕಾಮಗಾರಿಯ Pre-measurementನ್ನು ದಿ:06/06/16 & 14/06/16 ಮತ್ತು ಕಾಮಗಾರಿಯ ಅಳತೆಯನ್ನು ದಿ:25/07/16ರಂದು ದಾಖಲಿಸಿದೆ. ಸದರಿ ಅಳತೆಗಳನ್ನು 3ನೇ ಎದುರುದಾರರು ದಾಖಲಿಸಿದ್ದಾರೆ. ಸದರಿಯವರ ಸಹಿಯ ಕೆಳಗೆ ದಿನಾಂಕವನ್ನು ನಮೂದಿಸಿಲ್ಲ. ಸದರಿ ಅಳತೆಗಳನ್ನು 1ನೇ ಎದುರುದಾರರು Check

measurement ಮಾಡಿದ್ದಾರೆ. ಅದೇ ರೀತಿ, ಸದರಿಯವರು ಸಹ ತಮ್ಮ ಸಹಿಯ ಕೆಳಗೆ ದಿನಾಂಕವನ್ನು ನಮೂದಿಸಿಲ್ಲ;

6) ಕಿರಿಯ \ ಸಹಾಯಕ ಅಭಿಯಂತರರು ದಾಖಲಿಸಿದ್ದಾರೆಂದು ಹೇಳಲಾದ ಅಳತೆಗಳ ಕೊನೆಯಲ್ಲಿ 1 ಮತ್ತು 4ನೇ ಎದುರುದಾರರು "CKD & FC" ಎಂದು ಮಾತ್ರ ಬರೆದು, ಸಹಿ ಮಾಡಿದ್ದಾರೆ. ಕಿರಿಯ \ ಸಹಾಯಕ ಅಭಿಯಂತರರು ದಾಖಲಿಸಿದ ಅಳತೆಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ಶೇ.100 Check measurement ಮಾಡ ಬೇಕಿದ್ದು, ಸದರಿಯವರು ಶೇ.100 Check measurement ಮಾಡದೇ, ಕೇವಲ ಸಹಾಯಕ ಅಭಿಯಂತರರು ದಾಖಲಿಸಿದ್ದಾರೆನ್ನಲಾದ ಅಳತೆಯನ್ನು ದೃಢೀಕರಿಸಿರುವುದು ಮುದ್ರಿತ ಅಳತೆ ಪುಸ್ತಕದಲ್ಲಿ ಕಂಡು ಬಂದಿದೆ;

7) ಮುಂದುವರೆದು, ಕಿರಿಯ \ಸಹಾಯಕ ಅಭಿಯಂತರರು ದಾಖಲಿಸಿದ ಅಳತೆಯನ್ನು ವಿಭಾಗೀಯ ಮಟ್ಟದ ಅಧಿಕಾರಿಗಳು ಪರಿಶೀಲನೆ ನಡೆಸಿದ ಬಗ್ಗೆ ದಾಖಲೆಗಳಿಲ್ಲ. ಕಾಮಗಾರಿಯ ಪ್ರತಿ ಹಂತದಲ್ಲಿ ಸಹಾಯಕ ಅಭಿಯಂತರರು ಕಾಮಗಾರಿಯ ಅಳತೆಯನ್ನು ಅಳತೆ ಪುಸ್ತಕದಲ್ಲಿ ದಾಖಲಿಸುವ ಮೊದಲು, ಕಡ್ಡಾಯವಾಗಿ ದಾಖಲಿಸಿಕೊಳ್ಳಬೇಕಾದ ವಿವರಗಳು ಮುದ್ರಿತ ಅಳತೆ ಪುಸ್ತಕದಲ್ಲಿ ಕಂಡು ಬಂದಿಲ್ಲ. ಕಾರಣ, ಸದರಿ ಅಳತೆಗಳನ್ನು ಲೋಕೋಪಯೋಗಿ ಸಂಹಿತೆಯ ನಿಯಮಾನುಸಾರ ದಾಖಲಿಸದೇ, 1 ರಿಂದ 4ನೇ ಎದುರುದಾರರುಗಳು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ;

8) ಸದರಿ ಕಾಮಗಾರಿಗಳ ನಿರ್ವಹಣೆ ಸಮಯಕ್ಕೆ 5 ಮತ್ತು 6ನೇ ಎದುರುದಾರರುಗಳು ಕ್ರಮವಾಗಿ, ದಿನಾಂಕ:04/03/14 ರಿಂದ 30/07/16 ಹಾಗೂ 03/08/16 ರಿಂದ ಈವರೆಗೆ ಕಾರ್ಯಪಾಲಕ ಅಭಿಯಂತರರಾಗಿ ಶಿವಮೊಗ್ಗ ಯೋಜನಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಕಾಮಗಾರಿ ಮುಕ್ತಾಯದ ವರದಿಯಲ್ಲಿ ಸದರಿಯವರುಗಳ ಸಹಿ ಇಲ್ಲ;

9) ಕೆರೆ ದಂಡೆ ವ್ಯಾಪ್ತಿಯಲ್ಲಿ, ರಸ್ತೆ ಕಿರಿದಾಗಿರುವ ವ್ಯಾಪ್ತಿಯಲ್ಲಿ, ಗ್ರಾಮದ ವ್ಯಾಪ್ತಿಯಲ್ಲಿ, ಶಾಲೆಗಳ ವ್ಯಾಪ್ತಿಯಲ್ಲಿ ಹಾದು ಹೋಗಿರುವ ರಸ್ತೆಯ ಮಾರ್ಗದಲ್ಲಿ, ಸೂಚನಾ ಫಲಕಗಳು ಕಿತ್ತು ಹೋಗಿರುವುದು ತನಿಖೆ ಸಮಯದಲ್ಲಿ ಕಂಡು ಬಂದಿದೆಯೆಂದು ತನಿಖಾಧಿಕಾರಿಗಳು ಹೇಳಿದ್ದಾರೆ. ಕಾಮಗಾರಿಯ ನಿರ್ವಹಣಾ ಅವಧಿಯಲ್ಲಿ ರಸ್ತೆ ಬದಿಯಲ್ಲಿ ಅಳವಡಿಸಿರುವ ಸೂಚನಾ ಫಲಕಗಳು ಕಿತ್ತು ಹೋದ ಬಗ್ಗೆ ಎದುರುದಾರರುಗಳು ಏನು ಕ್ರಮ ಕೈಗೊಂಡಿದ್ದಾರೆ? ಎಂಬ ಬಗ್ಗೆ ಎದುರುದಾರರುಗಳು ಸ್ಪಷ್ಟಣೆ \ ವಿವರಣೆಯನ್ನು ನೀಡಿಲ್ಲ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ವರದಿಗಳು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 6ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

1901/16



9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 6ನೇ ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಅದಲ್ಲದೆ 1 ರಿಂದ 6ನೇ ಎದುರದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 4 ಮತ್ತು 6ನೇ ಎದುರುದಾರರು ಕ್ರಮವಾಗಿ, ದಿನಾಂಕ:31/07/2017 ಮತ್ತು 31/10/2017ರಂದು ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ** 214(2)(**ಬಿ**)(**i**)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 1 ರಿಂದ 6ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 4 ಮತ್ತು 6ನೇ ಎದುರುದಾರರು ಕ್ರಮವಾಗಿ ದಿನಾಂಕ:31/07/2017 ಮತ್ತು 31/10/2017ರಂದು ನಿವೃತ್ತಿ ಹೊಂದಿದ್ದಾರೆ.

N. Anand 16/7

(ನ್ಯಾಯಾಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

16/7